ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎನ್/ ವಿಶೇಷ ಸಭೆ/ 
**2020-21** ದಿನಾಂಕ: **10.07.2020.**

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ: **04.06.2020** ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳಿಗೆ ತಿದ್ದುಪಡಿ ಕುರಿತು.

ಉಲ್ಲೇಖ: **1)** ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ ಎಸ್‌ವೈಎನ್/ ವಿಶೇಷ ಸಭೆ/**23/2020-21,** ದಿನಾಂಕ: **18.06.2020**
**2)** ಮಾನ್ಯ 06 ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಇಮೇಲ್ ದಿನಾಂಕ: 24 ಮತ್ತು 25.06.2020.
**3)** ಕುಲಪತಿಗಳ ಅನುಮೋದನೆ ದಿನಾಂಕ: **6.07.2020**

***

ಉಲ್ಲೇಖ (1) ರ ಈ ಕಛೇರಿ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾದ ದಿನಾಂಕ: **04.06.2020** ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳಿಗೆ ಉಲ್ಲೇಖ (2) ರ ಇಮೇಲ್ ಮುಖಾಂತರ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಸಲಹೆ/ಅಭಿಪ್ರಾಯಗಳ ಹಿನ್ನೆಲೆಯಲ್ಲಿ ತಿದ್ದುಪಡಿ ಮಾಡಿದ ಪರಿಷ್ಕೃತ ನಡಾವಳಿಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
10/7/2020
ಕುಲಸಚಿವರು

*ಪ್ರತಿಗಳು:*

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎನ್/ ವಿಶೇಷ ಸಭೆ/40/2020-21 ದಿನಾಂಕ: 10.07.2020.

ದಿನಾಂಕ 04.06.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ **ಪರಿಷ್ಕೃತ ನಡಾವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫ್ಲೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 4. | ಶ್ರೀ ಹೆಚ್.ಆರ್. ಸತೀಶ್ | ಸದಸ್ಯರು |
| 5. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 6. | ಡಾ. ಆರ್. ಪಾರ್ವತಿ | ಸದಸ್ಯರು |
| 7. | ಡಾ. ಇ.ಬಿ.ರಾಜೇಶ್ | ಸದಸ್ಯರು |
| 8. | ಶ್ರೀ ಡಿ. ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 9. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 12. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 13. | ಡಾ. ಆರ್. ಕೆ. ಚಂದ್ರನಾಥ್ | ಸದಸ್ಯರು |
| 14. | ಡಾ. ವಿ. ಆರ್. ದೇವರಾಜು | ಸದಸ್ಯರು |

15. ಪ್ರೊ. ಬಿ. ರಮೇಶ್, ಕುಲಸಚಿವರು (ಮೌಲ್ಯಮಾಪನ) — ಸದಸ್ಯರು

16. ಶ್ರೀ ಪಿ. ಕುಮಾರ್, ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

ಕುಲಸಚಿವರು ಎಲ್ಲಾ ಸದಸ್ಯರನ್ನು ವಿಶೇಷ ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು. ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳನ್ನು ಸಿಂಡಿಕೇಟ್ ಸಭೆಗಳಿಗೆ ಖಾಯಂ ಆಮಂತ್ರಿತರಾಗಿ ಆಹ್ವಾನಿಸುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದರು.

**ಸಿಂಡಿಕೇಟ್ ನಿರ್ಣಯ:**

**ಹಣಕಾಸಿಗೆ ಸಂಬಂಧಿಸಿದ ವಿಷಯಗಳು ಸಿಂಡಿಕೇಟ್ ಕಾರ್ಯಸೂಚಿಯಲ್ಲಿದ್ದರೆ, ಆ ಸಂದರ್ಭದಲ್ಲಿ ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ ಅಭಿಪ್ರಾಯ ತಿಳಿಸಬಹುದೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

| | |
|---|---|
| ವಿಷಯ ಸಂಖ್ಯೆ–೧: | 43rd Indian Social Science Congress organised by the Indian Social Science Academy & Bengaluru Central University during January 17-21, 2020.<br><br>ಕುಲಸಚಿವರು 2020 ಜನವರಿ 17 ರಿಂದ 22 ರ ವರೆಗೆ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ ೪೩ನೇ ಭಾರತೀಯ ಸಮಾಜ ವಿಜ್ಞಾನಗಳ ಕಾಂಗ್ರೆಸ್ ಕುರಿತ ವಿವರಗಳನ್ನು ಸಭೆಗೆ ಒದಗಿಸಿದರು. ಕುಲಪತಿಗಳು ಸಹ ಈ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆ ಹಾಗೂ ಕಾರ್ಯಕ್ರಮಗಳ ಆಯೋಜನೆ ಕುರಿತು ಸವಿವರವಾಗಿ ಸಭೆಗೆ ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್, ಶ್ರೀಮತಿ ಜ್ಯೋತಿ ವಿಜಯ್, ಡಾ: ಹೆಚ್.ಟಿ. ಅರವಿಂದ್ ಶ್ರೀ ಹೆಚ್. ಆರ್. ಸತೀಶ, ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ, ಡಾ. ಆರ್.ಕೆ. ಚಂದ್ರನಾಥ್, ಡಾ: ಎಂ. ಪಾಂಡುರಂಗಪ್ಪ, ಡಾ: ವಿ.ಆರ್. ದೇವರಾಜ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿ, 43ನೇ ಭಾರತೀಯ ಸಮಾಜ ವಿಜ್ಞಾನಗಳ ಕಾಂಗ್ರೆಸ್ ಅಯೋಜನೆ, ಶೈಕ್ಷಣಿಕ ಜ್ಞಾನದ ವಿಕಾಸನದ ದೃಷ್ಟಿಯಿಂದ ಉತ್ತಮವಾದ ಕಾರ್ಯಕ್ರಮ ಇದರಿಂದ ವಿಶ್ವವಿದ್ಯಾಲಯ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ತಿಳಿಸಿ, ಇಂತಹ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ಆಯೋಜಿಸಿರುವುದು ಸಂತೋಷಕರ, ಇದರ ಶ್ರೇಯಸ್ಸು ಕುಲಪತಿಗಳಿಗೆ ಸಲ್ಲುತ್ತದೆ ಎಂದು ತಿಳಿಸಿ ಅಭಿನಂದನೆ ಸಲ್ಲಿಸಿದರು. ಈ ಕಾರ್ಯಕ್ರಮ ಆಯೋಜನೆಗಾಗಿ ಸಿಂಡಿಕೇಟ್ ಸಭೆಗಳಲ್ಲಿ |

ತೆಗೆದುಕೊಂಡ ತೀರ್ಮಾನಗಳನ್ನು ಹಾಗೂ ಇದಕ್ಕಾಗಿ ರೂ. 10 ಲಕ್ಷಗಳ ಮೂಲಧನ ಮಂಜೂರು ಮಾಡಿರುವುದನ್ನು ತಿಳಿಸಿದರು. ವರದಿಯಲ್ಲಿ ಮಹಾವಿದ್ಯಾಲಯಗಳ ಕುರಿತು ಪ್ರಸ್ತಾಪ ಇಲ್ಲವೆಂದು ತಿಳಿಸಿ ವರದಿಯನ್ನು ಸರಿಪಡಿಸಬೇಕು ಎಂದು ತಿಳಿಸಿ ಕೆಳಕಂಡ ಅಂಶಗಳನ್ನು ಸಿಂಡಿಕೇಟ್ ಮುಂದೆ ಮಂಡಿಸಲು ತಿಳಿಸಿದರು:

A. Approved Budget and terms;
B. Revenue from the event from various resources;
C. Expenditure incurred under various headings;
D. Bank Accounts opened for the purpose and its details;
E. All kinds of sponsors in kind and cash;
F. List of affiliated colleges that contributed in kind and cash.(mentioning the nature of their Contribution);
G. Report of the event, number of guests, participants, significant value addition to the body of Knowledge, awards given (if any).

G ಹೊರತುಪಡಿಸಿ ಉಳಿದ ಅಂಶಗಳಿಗೆ ಒದಗಿಸಿರುವ ಮಾಹಿತಿ ಅಪೂರ್ಣ/ಭಾಗಶಃವಾಗಿದೆ ಎಂದು ಅಭಿಪ್ರಾಯಪಟ್ಟರು.

ಗೌರವಾನ್ವಿತ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಕುಲಪತಿಗಳು ಮಹಾವಿದ್ಯಾಲಯಗಳಿಗೆ ಬರೆದ ಪತ್ರವನ್ನು ಸಭೆಗೆ ಓದಿ ಹೇಳಿ ಪತ್ರದ ಸಂಖ್ಯೆ ಹಾಗೂ ದಿನಾಂಕಗಳನ್ನು ನಮೂದಿಸದೇ ಇರುವುದನ್ನು ಆಡಳಿತಾತ್ಮಕ ದೋಷ ಎಂದು ತಿಳಿಸಿದರು. ಗೌರವಾನ್ವಿತ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ದೇಣಿಗೆಗಳ ಪಟ್ಟಿ ಅಪೂರ್ಣವಾಗಿರುವಂತೆ ಕಾಣುತ್ತದೆ ಎಂದು ತಿಳಿಸಿ, ದೇಣಿಗೆ/ಪ್ರಾಯೊಜಕತ್ವ ನೀಡಿದ ಮಹಾವಿದ್ಯಾಲಯಗಳಿಂದ ಮಾಹಿತಿ ಪಡೆಯಬೇಕೆಂದು ತಿಳಿಸಿದರು. ಭಾರತೀಯ ಸಮಾಜ ವಿಜ್ಞಾನ ಕಾಂಗೆಸ್‌ನ ಹಣಕಾಸು ಸಮಿತಿ ಸ್ವೀಕೃತಿ ಹಾಗೂ ಖರ್ಚುವೆಚ್ಚಗಳನ್ನು ಪರಿಗಣಿಸಬೇಕಾಗುತ್ತದೆ ನಂತರ ಸಿಂಡಿಕೇಟ್ ಸಭೆಗೆ ಮಂಡಿಸಬೇಕೇಂದು ತಿಳಿಸಿದರು. ವಿಶೇಷ ಸಿಂಡಿಕೇಟ್ ಸಭೆ ಕರೆಯಲು ನೀಡಿದ ಪತ್ರದಲ್ಲಿ ನಮೂದಿಸಿರುವ 7 ಅಂಶಗಳ ಕುರಿತು ವಿವರವಾದ ವರದಿ ನೀಡಬೇಕೆಂದು ತಿಳಿಸಿದರು. ಗೌರವಾನ್ವಿತ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಕಾರ್ಯವಿಧಾನದಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಸಭೆಗೆ ತಿಳಿಸಿದಲ್ಲಿ ಅದರಿಂದ ಗೌರವ ಹೆಚ್ಚುತ್ತದೆ ಎಂದು ತಿಳಿಸಿ ಸದಸ್ಯರು ನೀಡಿದ ಸಲಹೆಗಳ ಪ್ರಕಾರ ಸ್ವೀಕೃತಿ ಹಾಗು ವೆಚ್ಚಗಳ ನಿಖರವಾದ ಮಾಹಿತಿಯನ್ನು ಸಭೆಗೆ ನೀಡಲು ತಿಳಿಸಿದರು.

ಗೌರವಾನ್ವಿತ ಸದಸ್ಯರಾದ ಡಾ: ಆರ್. ಪಾರ್ವತಿಯವರು ಚರ್ಚೆಯಲ್ಲಿ ಭಾಗವಹಿಸಿ, ಈ

ಕಾರ್ಯಕ್ರಮ ಆಯೋಜಿಸುವ ಕುರಿತು ಹಲವಾರು ಉಪಸಮಿತಿಗಳನ್ನು ರಚಿಸಲಾಗಿದ್ದು, ತಾವು ಇಂತಹ ಒಂದು ಸಮಿತಿಯ ಸದಸ್ಯರಾಗಿದ್ದು, ಸಭೆ ಜರುಗಿದೆ ಎಂದು ತಿಳಿಸಿದರು.

ಗೌರವಾನ್ವಿತ ಸದಸ್ಯರಾದ ಡಾ: ಇ. ಬಿ. ರಾಜೇಶ್ ರವರು ಮಾತನಾಡಿ ೪೩ನೇ ಭಾರತೀಯ ಸಮಾಜ ವಿಜ್ಞಾನಗಳ ಕಾಂಗ್ರೆಸ್‌ನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಿರುವುದರಿಂದ ವಿಶ್ವವಿದ್ಯಾಲಯಕ್ಕೆ ಹೆಸರು ಬಂದಿದೆ, ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯಗಳು ಭಾಗವಹಿಸಿ ಸಹಾಯಮಾಡಿ ಯಶಸ್ವಿಗೊಳಿಸಿದ್ದಾರೆ. ಚರ್ಚೆಯ ಸ್ವರೂಪ ಗಮನಿಸಿದರೆ ಈ ಕಾರ್ಯಕ್ರಮದ ಆಯೋಜನೆ ಹಾಗೂ ಆದರ ಉದ್ದೇಶ ಕುರಿತು ಎರಡು ಮಾತಿಲ್ಲ, ಆದರೆ ಇದಕ್ಕಾಗಿ ಸ್ವೀಕರಿಸಿದ ಎಲ್ಲಾ ರೀತಿಯ ದೇಣಿಗೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಮತ್ತು ಬ್ಯಾಂಕ್ ಖಾತೆಯ ಮೂಲಕ ವೆಚ್ಚ ನಿರ್ವಹಿಸಬೇಕು ಎಂದು ಹೇಳಿದರು.

ಅಂತಿಮವಾಗಿ ಕುಲಪತಿಗಳು, ತಾವು ಈ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರದ, ವಿವಿಧ ಸಂಸ್ಥೆಗಳಿಗೆ ಧನಸಹಾಯಕ್ಕಾಗಿ ಸಂಪರ್ಕಿಸಿದ್ದು, ಯು.ಜಿ.ಸಿ. ಹೊರತುಪಡಿಸಿ ಬೇರೆ ಯಾರಿಂದಲೂ ಸಕಾರಾತ್ಮಕ ಸ್ಪಂದನೆ ದೊರೆತಿಲ್ಲವೆಂದು ತಿಳಿಸಿದರು. ಒಂದು ವೇಳೆ ಈ ಸಂಸ್ಥೆಗಳಿಂದ ಧನಸಹಾಯ ಒದಗಿ ಬಂದಿದ್ದಲ್ಲಿ ಮಹಾವಿದ್ಯಾಲಯಗಳಿಗೆ ಮನವಿ ಸಲ್ಲಿಸುವ ಪ್ರಸಂಗ ಬರುತ್ತಿರಲಿಲ್ಲವೆಂದು ತಿಳಿಸಿದರು. 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆಗೆ ಒಪ್ಪಿಗೆ ನೀಡಿ ಆಗಿರುವುದು ಹಾಗೂ ವಿಶ್ವವಿದ್ಯಾಲಯದಿಂದ ಹೆಚ್ಚಿನ ನೆರವು ಸಿಗುವ ಸಾಧ್ಯತೆ ಇಲ್ಲದಿರುವುದರಿಂದ ಮಹಾವಿದ್ಯಾಲಯಗಳ ಪ್ರಾಯೋಜಕತ್ವ ಕೋರಬೇಕಾಯಿತು ಎಂದು ತಿಳಿಸಿ, ಯು.ಜಿ.ಸಿ.ಯಿಂದ ರೂ. 20.00 ಲಕ್ಷಗಳ ಅನುದಾನ ಬಿಡುಗಡೆಯಾಗಬೇಕಾಗಿದ್ದು, ಈ ಅನುದಾನದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳ ಹಾಗೂ ಯುವ ವಿಜ್ಞಾನಿಗಳ ಪ್ರಯಾಣ ಭತ್ಯೆ ಹಾಗೂ ನೊಂದಣಿ ಶುಲ್ಕಕ್ಕಾಗಿ ರೂ. 12.00 ಲಕ್ಷಗಳನ್ನು ವೆಚ್ಚ ಮಾಡಬಹುದೆಂದು ತಿಳಿಸಿದರು. ಇದಲ್ಲದೆ, ಭಾರತೀಯ ಸಮಾಜ ವಿಜ್ಞಾನ ಅಕಾಡೆಮಿಯವರಿಂದ ಭಾಗವಹಿಸಿದ ಪ್ರತಿಯೊಬ್ಬ ಸ್ಥಳೀಯ ಪ್ರತಿನಿಧಿಗಳ ನೊಂದಣಿ ಶುಲ್ಕದ ಮೊತ್ತದಿಂದ ರೂ.1,000 ಹಾಗೂ ಪರಸ್ಥಳಗಳ ಪ್ರತಿನಿಧಿಗಳ ನೊಂದಣಿ ಶುಲ್ಕದ ಮೊತ್ತದಿಂದ ರೂ.1,500/- ರಂತೆ ಈ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುತ್ತಾರೆ. COVID-19 ಕಾರಣದಿಂದ ಅನುದಾನದ ಮೊತ್ತದ ಸ್ವೀಕೃತಿ ವಿಳಂಬವಾಗಿದೆ ಎಂದು ತಿಳಿಸಿದರು.

ಸದಸ್ಯರ ಅಭಿಪ್ರಾಯದಂತೆ ಈ ಕಾರ್ಯಕ್ರಮದ ಎಲ್ಲಾ ರೀತಿಯ ಸ್ವೀಕೃತಿ ಹಾಗೂ

<table>
<tr>
<td></td>
<td>ಖರ್ಚು ವೆಚ್ಚಗಳ ವಿವರಗಳನ್ನು ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್‌ನ ಹಣಕಾಸು ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸಿ, ಸಭೆಯ ವರದಿಯೊಂದಿಗೆ ಸಿಂಡಿಕೇಟ್ ಸಭೆಗೆ ಮಂಡಿಸುವುದಾಗಿ ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>i) The Syndicate resolved that Registrar shall write a letter to all the affiliated colleges, seeking information on the amount and nature of sponsorship/ contribution made by the respective colleges/ management to the event with proof of bills, with a timeline of two weeks for response from colleges with necessary proofs.<br>ii) Details of receipts and expenditure of the event should be brought before the Finance Committee constituted by Syndicate to monitor the event and then to the Syndicate.</td>
</tr>
<tr>
<td>ವಿಷಯ ಸಂಖ್ಯೆ–೨:</td>
<td>E-procurement of software for E-Governance and EMS-<br><br>ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು. ವಿಶ್ವವಿದ್ಯಾಲಯ 2018-19 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪ್ರವೇಶ ನೀಡಿ ಪರೀಕ್ಷೆಗಳನ್ನು ಜರುಗಿಸಲು ತೀರ್ಮಾನಿಸಿರುವುದು, ವಿಶ್ವವಿದ್ಯಾಲಯದ ಸಿಬ್ಬಂದಿಗಳ ಕೊರತೆ, ಪರೀಕ್ಷೆಗಳು ತ್ವರಿತವಾಗಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ E-Platform ಸಹಾಯದಿಂದ ಕೆಲಸ ನಿರ್ವಹಿಸುವ ಉದ್ದೇಶದಿಂದ ದಿನಾಂಕ 23.07.2018 ರಂದು short term tender ಕರೆದು 02.08.2018 ಕೊನೆಯ ದಿನಾಂಕವೆಂದು ನಿಗದಿಪಡಿಸಿ, ಟೆಂಡರ್ ಹೊರಡಿಸಲಾಗಿದೆ. Examination Management System (EMS) ಮತು ಇ–Governance ವಿಷಯಗಳ ಟೆಂಡರ್ ಪ್ರಕ್ರಿಯೆಗಳನ್ನು ಒಂದೇ ಸಲ ಜರುಗಿಸಿದ್ದು, ಟೆಂಡರ ಪರಿಶೀಲನಾ ಸಮಿತಿ ದಿನಾಂಕ 08.08.2018 ರಂದು ಸಭೆಸೇರಿ ಟೆಂಡರಿನ E-portal ನಲ್ಲಿ ಸ್ವೀಕರಿಸಲಾದ ಟೆಂಡರ್ ಗಳನ್ನು ತೆರೆದಾಗ ಇ–Governance ಗಾಗಿ ೪ ಸಂಸ್ಥೆಗಳು ಟೆಂಡರುಗಳನ್ನು ಸಲ್ಲಿಸಿದ್ದು. ನಿಗದಿ ಪಡಿಸಿದ ಮಾನದಂಡಗಳ ಪ್ರಕಾರ 3 ಟೆಂಡರ್‌ಗಳು ತಿರಸ್ಕೃತಗೊಂಡು Uniclare ಸಂಸ್ಥೆ ಅರ್ಹತೆ ಹೊಂದಿರುವುದನ್ನು ನಡಾವಳಿಯಲ್ಲಿ ದಾಖಲಿಸಲಾಗಿದೆ. ೩ ಸಂಸ್ಥೆಗಳು ಭಾಗವಹಿಸಿದ್ದು ಅವುಗಳಲ್ಲಿ 2 ಟೆಂಡರ್‌ಗಳು ತಿರಸ್ಕೃತಗೊಂಡು Logysis ಸಂಸ್ಥೆ ಅರ್ಹತೆ ಹೊಂದಿರುವುದನ್ನು</td>
</tr>
</table>

| | |
|---|---|
| | ದಾಖಲಿಸಲಾಗಿದೆ. ಅರ್ಹತೆ ಪಡೆದ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಿ ದರ ನಿಗದಿಪಡಿಸಿ Uniclare ಸಂಸ್ಥೆಯು ಸಲ್ಲಿಸಿದ ದರವನ್ನು ಪ್ರತಿ ವಿದ್ಯಾರ್ಥಿ ಪ್ರತಿ ಪರೀಕ್ಷೆಗೆ ರೂ.160 ರಿಂದ ರೂ.110/- ಗಳಿಗೆ ಕಡಿಮೆ ಮಾಡಿ, Logysis ಸಂಸ್ಥೆಯು ಸಲ್ಲಿಸಿದ ದರ ರೂ. 180/- ಪ್ರತಿ ವಿದ್ಯಾರ್ಥಿ ಪ್ರತಿ ಪರೀಕ್ಷೆಗೆ ಇರುವುದನ್ನು ರೂ.110/- ಕ್ಕೆ ಕಡಿಮೆ ಮಾಡಿ ಕಾರ್ಯಾದೇಶ ನೀಡಲಾಗಿದೆ ಎಂದು ವಿವರಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್, ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಕರಣ್‌ಕುಮಾರ್, ಡಾ. ಆರ್.ಕೆ. ಚಂದ್ರನಾಥ್ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿ, ಈ ಪ್ರಕ್ರಿಯೆ ಜರುಗಿದಾಗ ಸಿಂಡಿಕೇಟ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದು ತಿಳಿಸಿ ಕೆಳಕಂಡ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.<br><br>1. ಸರ್ಕಾರದಲ್ಲಿ software ಸೇವೆ ಪಡೆಯುವ ಪೂರ್ವದಲ್ಲಿ ಅನುಸರಿಸುವ ವಿಧಿವಿಧಾನಗಳ ಕುರಿತು ವಿತ್ತಾಧಿಕಾರಿಗಳಿಂದ ಮಾಹಿತಿ ಕೋರಲು, ತತ್ರಾಂಶ (software) ಸೇವೆ ಪಡೆಯುವ ಪೂರ್ವದಲ್ಲಿ ತಜ್ಞ ಸಂಸ್ಥೆಗಳಾದ IISc, NIC, E-Governance ನಂತಹ ಸಂಸ್ಥೆಗಳಲ್ಲಿ ಒಂದು ಸಂಸ್ಥೆಯಿಂದ ಅಭಿಪ್ರಾಯ ಪಡೆಯುತ್ತಾರೆ ಎಂದು ತಿಳಿಸಿ, Technical-Evaluation Committee ಯಲ್ಲಿ NIC ಅಥವಾ ಇ-Governance ನಿಂದ ಪ್ರತಿನಿಧಿ ಇರಬೇಕಾಗಿತ್ತು.<br>2. ಟೆಂಡರ್ ಮೊತ್ತ 2 ಕೋಟಿಗಳನ್ನು ಹೆಚ್ಚುವ ಸಂದರ್ಭದಲ್ಲಿ 60 ದಿವಸಗಳ ಸಮಯಾವಾಕಾಶ ನೀಡಬೇಕು. ಟೆಂಡರ್ ಅಧಿಸೂಚನೆಯಲ್ಲಿ 10 ದಿವಸಗಳ ಸಮಯ ನೀಡಲಾಗಿದೆ.<br>3. ನಿಯಮಗಳ ಪ್ರಕಾರ ಒಪ್ಪಂದದ ಅವಧಿ 5 ವರ್ಷಗಳಾಗಿದ್ದು ಟೆಂಡರ್ ದಾಖಲೆ ಬಿಡುಗಡೆ ಮಾಡುವಾಗ 5 ವರ್ಷಗಳಲ್ಲಿ ಒಳಗೊಳ್ಳುವ ಮೊತ್ತ ನಮೂದಿಸಬೇಕಾಗಿತ್ತು ಒಟ್ಟಾರೆ ಮೊತ್ತ ರೂ. 10 ಕೋಟಿ ಆದರೆ ಟೆಂಡರ್ ಇಂಡಿಯನ್ ಟ್ರೇಡ್ ಜರ್ನಲ್ ನಲ್ಲಿ ಪ್ರಕಟಿಸಬೇಕು – ಪ್ರಸ್ತುತ ವಿಷಯದಲ್ಲಿ ಆ ರೀತಿ ಮಾಡಿರುವುದಿಲ್ಲ.<br>4. ಒಂದೇ ತಾಂತ್ರಿಕ ಬಿಡ್ ಬಂದರೆ, ಮರು ಟೆಂಡರ್ ಪ್ರಕಟಣೆ ಆಗಬೇಕು.<br>5. ನಿಬಂಧನೆಗಳ ಪ್ರಕಾರ ೨ ವರ್ಷ ಇಂತಹದೇ ಸೇವೆ ನೀಡಿದ ಅನುಭವ ಇರಬೇಕು ಹಾಗೂ 3 ವರ್ಷಗಳ ಬ್ಯಾಲನ್ಸ್ ಶೀಟ್ ಸಲ್ಲಿಸಬೇಕು. ಆದರೆ Uniclare ಏಪ್ರಿಲ್ 2018 ರಲ್ಲಿ Pvt.Ltd. Company ಆಗಿ ನೊಂದಣಿಯಾಗಿದೆ.<br>6. Logysis ಮತ್ತು Uniclare ಎರಡು ಸಂಸ್ಥೆಗಳು ಒಬ್ಬರೇ ಮಾಲೀಕತ್ವ ಹೊಂದಿರುತ್ತಾರೆ.<br>7. Uniclare - Joint venture ಎಂದು ಟೆಂಡರ್ ದಾಖಲೆಯಲ್ಲಿ ನಮೂದಿಸಲಾಗಿದೆ. |

ಆದರೆ KTPP ನಿಯಮದಲ್ಲಿ ಇದಕ್ಕೆ ಅವಕಾಶ ಇರುವುದಿಲ್ಲ.

8. ಇ–Governance ವ್ಯವಸ್ಥೆ ಹೊಂದಿದ್ದರೂ ಸಹ ವಿದ್ಯಾರ್ಥಿಗಳಿಗೆ ಅಂಕ ಪಟ್ಟಿ ನೀಡುವಲ್ಲಿ ಸಾಕಷ್ಟು ವಿಳಂಬವಾಗಿರುವುದರಿಂದ ಈ ಪ್ರಕ್ರಿಯೆ ತ್ವರಿತಗೊಳಿಸುವ ಉದ್ದೇಶ ಸಫಲವಾಗಿಲ್ಲ.
9. ಖಾಲಿ ಅಂಕಪಟ್ಟಿಗಳ ಮುದ್ರಣ ವಿಶ್ವವಿದ್ಯಾಲಯದ ವತಿಯಿಂದಲೇ ಮುದ್ರಿಸ ಬೇಕು.
10. ದತ್ತಾಂಶ ಸಂಗ್ರಹಣೆ (Data storage) ಹಾಗೂ ಅವುಗಳ ಭದ್ರತೆ ಕುರಿತು ಕುಲಸಚಿವರು (ಮೌಲ್ಯಮಾಪನ)ಸಭೆಗೆ ಮಾಹಿತಿ ನೀಡಿ ದತ್ತಾಂಶಗಳು ಸಿ.ಡಿ ರೂಪದಲ್ಲಿ ಮತ್ತು ಸರ್ವರ್ ನಲ್ಲಿ ತಮ್ಮ ಸುಪರ್ದಿನಲ್ಲಿರುತ್ತದೆ ಎಂದು ತಿಳಿಸಿದರು. ಎಲ್ಲಾ ಮಾಹಿತಿ/ ದತ್ತಾಂಶಗಳನ್ನು ಪ್ರತಿಬಿಂಬದ (mirror image) ರೂಪದಲ್ಲಿ ಪ್ರತಿ ದಿವಸ ಸಂಗ್ರಹಿಸಿ ಭದ್ರವಾಗಿರಿಸಬೇಕು ಎಂದು ಸೂಚಿಸಲಾಯಿತು.
11. ಪರೀಕ್ಷಾ ಚಟುವಟಿಕೆ ಒಂದು ನಿಯಮಿತವಾದ ಕಾರ್ಯಕ್ರಮ ಅದನ್ನು ತುರ್ತು ಸಂದರ್ಭ ಎಂದು ಪರಿಗಣಿಸಲಾಗದು
12. ಈಗಾಗಲೇ ೩ ಪರೀಕ್ಷೆಗಳು ಮುಗಿಸಿದ್ದು, 2 ಸಲ ಬಿಲ್ಲುಗಳನ್ನು ಪಾವತಿಸಲಾಗಿದೆ. ರೂ. ೫ ಲಕ್ಷಕ್ಕಿಂತ ಹೆಚ್ಚು ಮೊತ್ತದ ಪಾವತಿಗಳಿಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಾಗಬಹುದು ಈ ಕುರಿತು ಬೆಂಗಳೂರು ವಿಶ್ವವಿದ್ಯಾಲಯದ ಮಾಹಿತಿ ಪಡೆಯಬೇಕು.
13. Examination Management System (EMS) ಮತು ಇ–Governance ಗಾಗಿ ಸಿದ್ದಪಡಿಸಿದ ತತ್ರಾಂಶ ಹೊಂದಿರುವ ಭದ್ರತಾ ವೈಶಿಷ್ಟ್ಯಗಳ (security features) ಕುರಿತು NIC ಯಿಂದ ಮೌಲ್ಯೀಕರಿಸಿರುವ (validate) ಮಾಹಿತಿ ನೀಡಬೇಕು.

**ಸದಸ್ಯರು ಮುಂದುವರೆದು, ಈ ಕೆಳಕಂಡ ಅಂಶಗಳ ಬಗ್ಗೆ ಸ್ಪಷ್ಟೀಕರಣಗಳನ್ನು ಬಯಸಿದರು:**

1. While the tender document mentions that the tender amount as Rs.1.25 crores, the same for five years (the period of MoU) amounts to approximately to Rs.10.27 crores, the financial implication of the two MoUs relating to the e-procurement of the two exam related softwares may be explained.
2. Justification for calling a short-term tender of 10-days notice referring as 'urgent/ emergency' for a planned bi-annual activity viz. the University semester exams, need to be justified.
3. Explanation for the escalated cost of Rs. 280/- per student per semester exam for this digitization need to be provided.
4. The standard tender document is not available and reasons for not publishing in the Indian Trade Journal isn't furnished.
5. The Tender Scrutiny Committee has not given reasons for calling another bid when it is found that only one company in each case emerged from the Technical bid.

6. There is no mention regarding knowledge & technological transfer, source data code and data ownership, which finds no mention in the MoU, so also the data security and confidentiality of the data relating to examination and results of the students. The same has to be provided
7. Security deposits obtained by the two bid winning organizations and the Joint venture between the two winning companies are missing
8. The expertise of Uniclare, which was born three months prior to the bidding is not justified.
9. The company registration copy of the Logisys is to be provided. Whether it is a proprietorship company and whether the Proprietor of Logisys (Sri Ramesh H N) is the Director of Uniclare is to be clarified.

ಹಣಕಾಸು ಅಧಿಕಾರಿಗಳು ವಿವರಣೆ ನೀಡಿ, ವಿಶ್ವವಿದ್ಯಾಲಯದಲ್ಲಿ Delegation of Administration / Financial powers ಕುರಿತಂತೆ ನಿಯಮಾವಳಿಗಳು ಇಲ್ಲ. ಸರ್ಕಾರದಲ್ಲಿ ಇಲಾಖಾ ಮುಖ್ಯಸ್ಥರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಸಂದರ್ಭದಲ್ಲಿ ಪಾವತಿ ಮಾಡಲು ಅಧಿಕಾರವಿದೆ ಎಂದು ತಿಳಿಸಿದರು.

ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತನಾಡಿ, ವಿಶ್ವವಿದ್ಯಾಲಯ ಈ ಎರಡು ಸಂಸ್ಥೆಗಳಿಗೆ ಕೊಟ್ಟಿರುವ ಕೆಲಸಗಳಿಗೆ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಿದಲ್ಲಿ, ಇ–Governance ಗೆ ರೂ. 45-00 ರಿಂದ 48–00 ಹಾಗೂ EMS ಗೆ ರೂ.79–00 ರಿಂದ 82–00 ನೀಡಬಹುದಾಗಿದೆ ಎಂದು ತಿಳಿಸಿದರು. **RFD** ಗಳನ್ನು IISc ಅಥವಾ NIC ಯಿಂದ ಧೃಢೀಕರಿಸಬೇಕಾಗಿತ್ತು ಎಂದು ತಿಳಿಸಿ, ಟೆಂಡರ್ ದಸ್ತಾವೇಜಿನಲ್ಲಿ indicative cost ತೋರಿಸಿರುವುದು ಸರಿಯಲ್ಲ ಎಂದು ತಿಳಿಸಿದರು.

ಗೌರವಾನ್ವಿತ ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ರವರು ಒಂದು ವರ್ಷದ ಮೊತ್ತ ರೂ.1.25 ಕೋಟಿ ಮಾತ್ರ ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಲಾಗಿದೆ, 5 ವರ್ಷಗಳ ಮೊತ್ತ ನಮೂದಿಸಬೇಕಾಗಿತ್ತು ಹಾಗೆ ಲೆಕ್ಕ ಮಾಡಿದಲ್ಲಿ 7 ರಿಂದ 7.5 ಕೋಟಿ ಮೊತ್ತವಾಗುತ್ತದೆ TCS ಅಂತಹ ಸಂಸ್ಥೆಯ ಬಿಡ್ ತಿರಸ್ಕೃತಗೊಂಡಿರುವುದು ಆಶ್ಚರ್ಯಕರವಾದದು ಎಂದು ತಿಳಿಸಿ, ನಿಗದಿಪಡಿಸಿದ ಅರ್ಹತೆ ಇದ್ದಲ್ಲಿ ಮಾತ್ರ ಅಂತಹ ಸಂಸ್ಥೆಗಳು ಟೆಂಡರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತವೆ ಎಂದು ತಿಳಿಸಿದರು. Joint venture Company ಗಳು ಅರ್ಹತೆ

| | |
|---|---|
| | ಹೊಂದಿರುವುದಿಲ್ಲ. ಆ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಕುಲಸಚಿವರು(ಮೌಲ್ಯಮಾಪನ) ರವರು ಇದಕ್ಕೆ ಜವಾಬ್ದಾರಿಯಾಗುತ್ತಾರೆ ಎಂದು ತಿಳಿಸಿದರು. ಗೌರವಾನ್ವಿತ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಒಂದೇ ಒಂದು ಸಂಸ್ಥೆ ಟೆಂಡರ ಪ್ರಕ್ರಿಯೆಯ ಅರ್ಹತೆ ಹೊಂದಿದ್ದರೆ ಅದನ್ನು ಒಪ್ಪಿಕೊಳ್ಳುವ ತುರ್ತು ಸಂದರ್ಭ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.<br><br>ಕುಲಪತಿಗಳು ವಿವರ ನೀಡಿ, ಈ ಪ್ರಕ್ರಿಯೆ ಪ್ರಾರಂಭ ಮಾಡುವ ಪೂರ್ವದಲ್ಲಿ ಈ ತರಹದ software ಅಗತ್ಯ ಕುರಿತು NIC ಪ್ರತಿನಿಧಿ, ಮೈಸೂರು ವಿಶ್ವವಿದ್ಯಾಲಯ ಕಂಪ್ಯೂಟರ್ ವಿಭಾಗದ ಪ್ರಾಧ್ಯಾಪರು ಹಾಗೂ ಪ್ರಸ್ತುತ ಕುಲಪತಿಗಳಾಗಿರುವ ಡಾ: ಹೇಮಂತ ಕುಮಾರ್ ಹಾಗೂ ಇನ್ನಿತರ ತಜ್ಞರ ಸಭೆ ಕರೆದು ಅಭಿಪ್ರಾಯ ಪಡೆಯಲಾಗಿದೆ ಎಂದು ತಿಳಿಸಿದರು. NIC ಯಿಂದ ಸೇವೆ ಪಡೆಯಬಹುದಾಗಿತ್ತು ಆದರೆ ಅಲ್ಲಿ ಸರಿಯಾದ Backup ಇಲ್ಲ ಮತ್ತು ಅವರಲ್ಲಿ ಸಿಬ್ಬಂದಿಗಳ ಕೊರತೆ ಇರುವುದನ್ನು ತಿಳಿಸಿದರು. ಬೆಂಗಳೂರು ವಿಶ್ವವಿದ್ಯಾಲಯ 2018-19 ನೇ ಸಾಲಿನ ಪ್ರವೇಶ ಹಾಗೂ ಪರೀಕ್ಷೆಗಳನ್ನೂ ತಾವೇ ನಡೆಸಬೇಕೆಂಬ ಚಿಂತನೆಯಲ್ಲಿದ್ದರು. ಈ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳು ಇರಲಿಲ್ಲ ಇಂತಹ ಸವಾಲಿನ ಸಂದರ್ಭದಲ್ಲಿ EMS ಮತ್ತು ಇ–Governance ಸೇವೆಗಳನ್ನು ಪಡೆಯುವುದು ಅನಿವಾರ್ಯವಾಗಿರುವುದರಿಂದ ಈ ಪ್ರಕ್ರಿಯೆ ನಡೆಸಲು ತೀರ್ಮಾನಿಸಲಾಯಿತು ಎಂದು ತಿಳಿಸಿದರು.<br><br>ಕುಲಸಚಿವರು ವಿವರ ನೀಡಿ ತಾಂತ್ರಿಕ ಪರಿಶೀಲನಾ ಸಮಿತಿ ನಿಗದಿಪಡಿಸಿರುವ ಮಾನದಂಡಗಳನ್ನು ನಿಗದಿಪಡಿಸಿ ಅದಕ್ಕೆ ಸಂವಾದಿಯಾಗಿ ಅಂಕಗಳನ್ನು ನೀಡಿ ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಿರುವ ಕುರಿತು ಹಾಗೂ ಸದರಿ ಸಂಸ್ಥೆಗಳು ಗಳಿಸಿದ ಅಂಕಗಳನ್ನು ಹಾಗೂ ತಿರಸ್ಕರಿಸಲು ನೀಡಲಾದ ಕಾರಣಗಳನ್ನು ವಿವರಿಸಿದರು. ನೊಂದಾಯಿತ ಯಾವುದೇ ಕಂಪನಿ ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ: ಆರ್. ಪಾರ್ವತಿ, ಡಾ: ಇ. ಬಿ. ರಾಜೇಶ ಮತ್ತು ಡಾ: ಬಿ. ಎ.ಅನುರಾಧಾ ರವರು ಪ್ರಸ್ತುತ ವ್ಯವಸ್ಥೆಯಿಂದಾಗಿ 8-10 ದಿವಸಗಳಲ್ಲಿ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ. ಈಗ ಇರುವ ಸಾಫ್ಟ್ ವೇರ್ ವಿದ್ಯಾರ್ಥಿ ಹಾಗೂ ಮಹಾವಿದ್ಯಾಲಯಗಳ ದೃಷ್ಟಿಯಿಂದ ಸರಿ ಇದೆ. ಯಾವುದೇ ರೀತಿಯ ಸಮಸ್ಯೆಗಳಿಗೆ ಆಸ್ಪದವಿಲ್ಲ, ಯಾವುದಾದರೂ ಲೊಪದೋಷವಾಗಿದ್ದಲ್ಲಿ ಅದನ್ನು ಚರ್ಚೆ ಮಾಡಿ ತೀರ್ಮಾನ ಕೈಗೊಳ್ಳಬೇಕು, ಅಗತ್ಯವಾದರೆ ಹಿಂದಿನ ಕುಲಸಚಿವರು(ಮೌಲ್ಯಮಾಪನ) ರವರನ್ನು ಕರೆಸಿ ಮಾಹಿತಿ ಪಡೆಯಬೇಕು ಎಂದು ತಿಳಿಸಿದರು. |

ಗೌರವಾನ್ವಿತ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ಅವರು ಸದಸ್ಯರು ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕು ನೇರವಾಗಿ ಸದಸ್ಯರನ್ನು ಉದ್ದೇಶಿಸಿ ಮಾತನಾಡುವುದು ಸರಿಯಲ್ಲ. ಮಾನ್ಯ ಸದಸ್ಯರು ಸಮಸ್ಯೆಗಳಿಗೆ ಪರಿಹಾರಗಳನ್ನು ಕುರಿತು ಅಭಿಪ್ರಾಯ ನೀಡಬೇಕು. ಸದಸ್ಯರು ಸೂಚಿಸುತ್ತಿರುವ ಲೋಪದೋಷಗಳಿಗೆ ಸಮಂಜಸವಾದ ಉತ್ತರ ನೀಡಬೇಕು. ಅಂಕ ಪಟ್ಟಿಗಳನ್ನು ವಿಶ್ವವಿದ್ಯಾಲಯವೇ ಮುದ್ರಿಸಿ ವಿತರಿಸಲು ವ್ಯವಸ್ಥೆ ಆಗಬೇಕೆಂದು ತಿಳಿಸಿದರು. ದತ್ತಾಂಶಗಳನ್ನು ಕಾಲಕಾಲಕ್ಕೆ ಸುಪರ್ದಿಗೆ ತೆಗೆದುಕೊಂಡು ಸುರಕ್ಷಿತವಾಗಿಡಬೇಕು ಹಾಗು ಅವುಗಳಿಗೆ 2 ಹಂತದ ಡಿಜಿಟೆಲ್ ಭದ್ರತೆ ಒದಗಿಸಬೇಕೆಂದು ತಿಳಿಸಿದರು.

ಸುದೀರ್ಘ ಚರ್ಚೆಯಲ್ಲಿ ಈ ಕುರಿತು ವಾಸ್ತವಾಂಶಗಳ ವರದಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಬೇಕೆಂದು ಸದಸ್ಯರು ಅಭಿಪ್ರಾಯಪಟ್ಟು ಕೆಳಕಂಡಂತೆ ನಿರ್ಣಯಿಸಲಾಯಿತು.

**ಸಿಂಡಿಕೇಟ್ ನಿರ್ಣಯ:**

**The Syndicate resolved that :**

a) **Justification answer to each specific question (9 questions) with proof of document are to be provided to the next Syndicate meeting.**

b) **Explanation from the then Registrar (Evaluation), Prof. Lingaraju Gandhi shall be sought on areas that were pointed out.**

c) **Logysis** ಮತ್ತು **Uniclare** ಸಂಸ್ಥೆಗಳು ನೀಡುತ್ತಿರುವ ಸೇವೆಗೆ ಸಂಬಂಧಿಸಿದಂತೆ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲು ಸಿಂಡಿಕೇಟ್ ಸದಸ್ಯರಾದ ಶ್ರೀ ಕರಣ್‌ಕುಮಾರ್, ಡಾ: ಇ. ಬಿ. ರಾಜೇಶ್ ಮತ್ತು ಕುಲಸಚಿವರು (ಮೌಲ್ಯಮಾಪನ) ರವರನ್ನು ಒಳಗೊಂಡ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು

ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ